# ನಿವೇದನೆ

## ಹೊಸ ವರ್ಷದ ನಿರೀಕ್ಷೆ

> ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಕೊಡುವ ಮನಸ್ಸುಗಳ ಸಂಖ್ಯೆ ಹೊಸ ವರ್ಷದಲ್ಲಿ ನೂರ್ಮಡಿಯಾಗಲಿ. ಹಳೆ ಪೀಳಿಗೆಯ ಅನುಭವ ಮತ್ತು ಹೊಸ ಪೀಳಿಗೆಯ ಸಾಹಸ ಮನೋಭಾವ ಎರಡೂ ಹದವಾಗಿ ಬೆರೆತು ನವಸಮಾಜ ನಿರ್ಮಾಣವಾಗಲಿ.

ವರ್ಷದ ಕೊನೆಯಲ್ಲಿ ಚಳಿಗೆ ಮುದುರಿ ಮಲಗುತ್ತದೆ ಮನಸ್ಸು ಮತ್ತು ದೇಹ. ಈ ಸಲ ಚಳಿ ಸ್ವಲ್ಪ ಜೋರಾಗಿಯೇ ಇದ್ದಂತಿದೆ. ಡಿಸೆಂಬರ್ ಬಂತೆಂದರೆ ಹಿಂತಿರುಗಿ ನೋಡುವ ತಹತಹ. ಸಂದು ಹೋದ ವರ್ಷದಲ್ಲಿ ಏನೇನಾಯ್ತು ಎಂದು ನೆನಪಿಸಿಕೊಳ್ಳುವ ತವಕ. ವರ್ಷದ ಕೊನೆಗೆ ಬದುಕಿನ ಪುಟಗಳನ್ನು ತಿರುವಿ ಹಾಕುತ್ತಾ ಹೋದರೆ, ನಿಟ್ಟುಸಿರು ತಡೆಯಲು ಆಗುವುದಿಲ್ಲ. ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ದುಃಖ ತಂದ ಸಂಗತಿಗಳೇ ಹೆಚ್ಚು. ಕೆಲವು ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವದ ದಾಹ; ಅದನ್ನು ದಮನಿಸಲು ಆಳುವವರಿಂದ ಶಸ್ತ್ರದೌರ್ಜನ್ಯ. ಪ್ರಜಾಪ್ರಭುತ್ವ ಇರುವ ರಾಷ್ಟ್ರಗಳಲ್ಲಿ ಹಣದುಬ್ಬರದ ಹೊಡೆತ; ಜೀವನ ಬಲು ದುರ್ಭರ! ಅದರ ಜತೆಗೇ ಪ್ರಕೃತಿಯೂ ಈ ಸಲ ಮನುಷ್ಯನ ಮೇಲೆ ಮುನಿಸಿಕೊಂಡಂತಿದೆ. ಉತ್ತರಾಖಂಡದ ಅಕಾಲಿಕ ಮಳೆಯ ದುರಂತವಂತೂ ಇಡೀ ದೇಶವನ್ನು ಒಂದಿಡೀ ವಾರ ಕಾಲ ಆತಂಕದ ಮಡುವಿಗೆ ದೂಡಿದ್ದು ಸುಳ್ಳಲ್ಲ.

ಸುಖ–ದುಃಖ ಎರಡೂ ಬದುಕಿನ ಎರಡು ನಾಣ್ಯಗಳಿದ್ದಂತೆ. ಡಿಸೆಂಬರ್‌ನ ಚಳಿಗೆ ಎಲೆ ಉದುರಿಸಿಕೊಳ್ಳುವ ಗಿಡಮರಗಳು, ಹೊಸ ವರ್ಷದ ಬೆಳಕಲ್ಲಿ ನಿಧಾನಕ್ಕೆ ಋತುವಿನ ಇನ್ನೊಂದು ಮಗ್ಗುಲಿಗೆ ಹೊರಳಿಕೊಳ್ಳುತ್ತವೆ. ಅವಕ್ಕೂ ಮುಂಬರುವ ಚೈತ್ರ– ವಸಂತದ ನಿರೀಕ್ಷೆ. ನಮ್ಮ ಬದುಕಿನಲ್ಲೂ ಹಾಗೆಯೇ; ದುಃಖ ಪೂರ ಉಕ್ಕುಕ್ಕಿ ಹರಿದು ಬಾಳ ದಂಡೆ ಕೊಚ್ಚಿ ಹೋದರೂ, ಉತ್ಸಾಹ ಸಾಹಸದ ಉತ್ತುಂಗ ವೀಚಿಗಳನ್ನು ಮತ್ತೆ ಮುಟ್ಟುವ ತವಕ. ಜೀವನೋತ್ಸಾಹ ಮರಳಿ ಪುಟಿಯಲು ಇಂತಹದ್ದೇ ಕಾರಣಗಳು ಬೇಕೆಂದಿಲ್ಲ. ಅದು ಮನುಜಸಹಜ ಪ್ರವೃತ್ತಿ. ಈಸಬೇಕು, ಇದ್ದು ಜೈಸಬೇಕು ಎನ್ನುವ ಮನೋಭಾವ ನಿರಂತರವಾಗಿರಬೇಕು. ಜೈಸದಿದ್ದರೂ ಈಸುವುದಂತೂ ನಿಲ್ಲಬಾರದು.

ರಾಜಕೀಯ ಕಲುಷಿತಗೊಂಡಿದೆ. ಶಿಕ್ಷಣ– ಆರೋಗ್ಯ ದುಬಾರಿಯಾಗಿದೆ. ಅಪರಾಧಗಳ ಸಂಖ್ಯೆ ಏರುತ್ತಿದೆ. ಹಣದುಬ್ಬರವನ್ನು ತಡೆಯಲು ಆಳುವವರಿಗೆ ಆಗುತ್ತಿಲ್ಲ. ನಿರಂತರ ಬೆಲೆ ಏರಿಕೆಯಿಂದ ಜನಸಾಮಾನ್ಯರ ಬದುಕು ದುರ್ಭರವಾಗಿದೆ. ಹಬ್ಬಗಳ ಸಂಭ್ರಮವನ್ನು ಆಚರಿಸುವಾಗಲೂ ಕೈಬಿಗಿಹಿಡಿದು, ತಂತಿಯ ಮೇಲೆ ನಡೆಯಬೇಕಾದ ಅನಿವಾರ್ಯತೆ. ಇರುವವರು ಮತ್ತು ಇಲ್ಲದವರ ನಡುವಣ ಅಂತರ ಮತ್ತಷ್ಟು ಹೆಚ್ಚುತ್ತಿದೆ. 'ಸಂಸ್ಕಾರವಿಲ್ಲ ಹೆಣಕೆಂದು ತಲೆಗೆ ಕೈಹೊತ್ತ ಬಡವನೊಬ್ಬ; ಇನ್ನೊಬ್ಬ ತಾನು ಆಚರಿಸುತಿರುವ ವೈಭವದ ಹುಟ್ಟುಹಬ್ಬ..' ಎಂಬ ಕವಿವಾಣಿ ಈಗಲೂ ಸತ್ಯ! ಹೊಸ ವರ್ಷದಲ್ಲಾದರೂ ಈ ಸ್ಥಿತಿ ಬದಲಾಗಬೇಕಿದೆ. ಸಂಪತ್ತಿನ ಸಮಾನ ಹಂಚಿಕೆಯನ್ನು ರೂಢಿಸುವ ಹೊಸ ಯೋಜನೆಗಳನ್ನು ಆಳುವವರು ರೂಪಿಸಬೇಕಿದೆ. ಜಾಗತೀಕರಣದ ಅಲೆಯಲ್ಲಿ ತೇಲಿಹೋದರೆ ಸ್ವರ್ಗವೇ ಧರೆಗಿಳಿದು ಬರುತ್ತದೆ ಎಂದು ಪ್ರಜೆಗಳನ್ನು ನಂಬಿಸಿ ದಶಕಗಳೇ ಉರುಳಿವೆ. ಆದರೆ ಜೀವನಮಟ್ಟವನ್ನು ಎತ್ತರಿಸುವಲ್ಲಿ ಗಮನಾರ್ಹ ಸಾಧನೆಗಳಂತೂ ಆಗಿಲ್ಲ. ಆರ್ಥಿಕತೆಯನ್ನು ಜನಸಾಮಾನ್ಯರ ಬದುಕಿನ ಗುಣಮಟ್ಟ ಹೆಚ್ಚಿಸುವಂತೆ ಮರುರೂಪಿಸುವ ಮನಸ್ಸುಗಳು ಈ ಕಾಲದ ಅಗತ್ಯ.

ವರ್ಷದುದ್ದಕ್ಕೂ ಕಾಡಿದ ಮುಖ್ಯ ಬೇನೆಯೆಂದರೆ ಹೆಣ್ಣಿನ ಮೇಲಿನ ದೌರ್ಜನ್ಯ. ಲಿಂಗ ತಾರತಮ್ಯ ಅನ್ಯಾಯ ಎನ್ನುವುದನ್ನು ಒಪ್ಪದ ಗಂಡುಮನಸ್ಸುಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹೆಣ್ಣು ಹುಟ್ಟಿರುವುದೇ ತಾರತಮ್ಯ ಅನುಭವಿಸಲು ಎನ್ನುವ ಅಮಾನವೀಯ ಮನಸ್ಸುಗಳಿಗೆ ಕಡಿವಾಣ ಹಾಕುವುದು ಹೇಗೆ? ಆಧುನಿಕ ತಂತ್ರಜ್ಞಾನ ಮತ್ತು ಸಮೂಹ ಮಾಧ್ಯಮಗಳೂ ಈ ತಾರತಮ್ಯದ ಸಂಕೋಲೆಗಳನ್ನು ಪರೋಕ್ಷವಾಗಿ ಬಲಪಡಿಸುತ್ತಿವೆ. ಕಠಿಣ ಕಾನೂನುಗಳನ್ನು ಎಷ್ಟೇ ತಂದರೂ ಗಂಡಿನ ಪಾಳೇಗಾರಿ ಮನಸ್ಸನ್ನು ಮೆದುಗೊಳಿಸಲು ಸಾಧ್ಯವಾಗುತ್ತಿಲ್ಲ. ಇಡೀ ದೇಶವನ್ನೇ ತಲ್ಲಣಗೊಳಿಸಿದ ನಿರ್ಭಯ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳಿಗೆ ಗಲ್ಲುಶಿಕ್ಷೆ ಆಯಿತು. ಇಡೀ ದೇಶಕ್ಕೇ ಕಠಿಣ ಸಂದೇಶವೊಂದನ್ನು ಕೋರ್ಟ್ ನೀಡಿದೆ ಅಂದುಕೊಂಡರೂ, ಆ ಬಳಿಕ ಮಹಿಳೆಯರ ಮೇಲಿನ ದೌರ್ಜನ್ಯಗಳ ಸಂಖ್ಯೆ ಕಡಿಮೆಯಾಗಿಲ್ಲ; ಇನ್ನಷ್ಟು ಹೆಚ್ಚಿವೆ!

ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು ಕೊಡುವ ಮನಸ್ಸುಗಳ ಸಂಖ್ಯೆ ಹೊಸ ವರ್ಷದಲ್ಲಿ ನೂರ್ಮಡಿಯಾಗಲಿ. ಹಳೆ ಪೀಳಿಗೆಯ ಅನುಭವ ಮತ್ತು ಹೊಸ ಪೀಳಿಗೆಯ ಸಾಹಸ ಮನೋಭಾವ ಎರಡೂ ಹದವಾಗಿ ಬೆರೆತು ನವಸಮಾಜ ನಿರ್ಮಾಣವಾಗಲಿ. ಶುದ್ಧ ನೀರು, ಸ್ವಚ್ಛ ಗಾಳಿ– ಬೆಳಕು ಎಲ್ಲರ ಸೊತ್ತಾಗಲಿ. ಹೊಸ ವರ್ಷ ನೆಮ್ಮದಿಯ ನಾಳೆಗಳನ್ನು ರೂಪಿಸಲಿ.

■ ಬಿ.ಎಂ.ಹನೀಫ್



ಈಶ್ವರ್